## ಅಪ್ಪು ಶೋಭೆ

ಕಲರ್ಸ್ ಕನ್ನಡದಲ್ಲಿ ಪುನೀತ್ ರಾಜ್‌ಕುಮಾರ್‌ರವರು ನಡೆಸಿ ಕೊಡುವ ಕೋಟ್ಯಧಿಪತಿ ಕಾರ್ಯಕ್ರಮ ಶುರುವಾಗಿದೆ. ಕೆಲವರಿಂದ ಕೆಲವು ಕಾರ್ಯಕ್ರಮಕ್ಕೆ ಶೋಭೆ ಬರುತ್ತದೆ ಎನ್ನುವುದು ಈ ಕಾರ್ಯಕ್ರಮ ವೀಕ್ಷಿಸಿದಾಗ ಅನುಭವಕ್ಕೆ ಬರುತ್ತದೆ. ಅವರಿಗೆ ಅವರೇ ಸರಿಸಾಟಿ ಎನ್ನುವುದು ನಿರೂಪಿತವಾಗುತ್ತಲೇ ಇರುತ್ತದೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಮನಸೆಳೆಯುವ ಭಾರ್ಗಿ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿರುವ 'ಮಗಳು ಜಾನಕಿ' ಧಾರಾವಾಹಿ ವೀಕ್ಷಕರಿಗೆ ಪ್ರತಿದಿನ ಕುತೂಹಲದ ಜೊತೆ ಸಂತೋಷವನ್ನು ಉಂಟು ಮಾಡುತ್ತಿದೆ. ಅದರಲ್ಲಿ ಚಂದು ಭಾರ್ಗಿ ಬಹಳ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಇಂದಿನ ರಾಜಕಾರಣದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ರವಿಯವರು ಆ ಪಾತ್ರಕ್ಕೆ ಜೀವ ತುಂಬಿ ಎಲ್ಲರ ಗಮನವನ್ನು ಸೆಳೆಯುತ್ತಿರುವರು. ಒಂದು ಪಾತ್ರದ ಯಶಸ್ಸು, ಆ ಪಾತ್ರಧಾರಿಯ ನಟನಾ ಕೌಶಲ್ಯದ ಜೊತೆ ಆ ಪಾತ್ರದಲ್ಲಿ ಅವರು ತಮ್ಮನ್ನು ತಾವು ತೊಡಗಿಸಿಕೊಳ್ಳುವ ರೀತಿಯನ್ನು ಅವಲಂಬಿಸಿರುತ್ತದೆ. ವೀಕ್ಷಕರಿಗೆ ನಟನು ವ್ಯಕ್ತಿಯಾಗಿ ಕಾಣುವುದಕ್ಕಿಂತ ಪಾತ್ರವಾಗಿ ಕಾಣಿಸಿಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ. ರವಿ ಮಂಡ್ಯ ಪ್ರತಿ ಸನ್ನಿವೇಶದಲ್ಲೂ ಪ್ರೇಕ್ಷಕರನ್ನು ತಮ್ಮ ನಟನಾ ಕೌಶಲ್ಯದಿಂದ ಹಿಡಿದಿಟ್ಟುಕೊಳ್ಳುತ್ತಾರೆ. ಅವರು ಅಭಿನಯಿಸುವಾಗ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ಅವರ ಮುಖಭಾವ, ವಿಚಾರಕ್ಕೆ ತಕ್ಕಂತೆ ತಿರುಗುವ ಕಣ್ಣುಗಳ ನೋಟ, ಮಾತುಗಳ ಸ್ಪಷ್ಟತೆ ಎಲ್ಲವೂ ಮೇಳೈಸಿ ಪಾತ್ರವು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## 'ಅಗ್ನಿಸಾಕ್ಷಿ'ಯಲ್ಲಿ ವಿಲನ್‌ಗಳು



ಕಲರ್ಸ್ ಕನ್ನಡದ 'ಅಗ್ನಿಸಾಕ್ಷಿ' ಧಾರಾವಾಹಿ ಬಗ್ಗೆ ಸಾಕಷ್ಟು ಪತ್ರಗಳನ್ನು ವೀಕ್ಷಕರು ಬೇಸರದಿಂದ ಬರೆದಿದ್ದರೂ ಕೂಡ ನಮಗೆ ಸಂಬಂಧವಿಲ್ಲವೆನ್ನುವಂತೆ ಇನ್ನೂ ಧಾರಾವಾಹಿಯನ್ನು ಎಳೆದುಕೊಂಡು ಹೋಗುತ್ತಿರುವುದು ಬೇಸರದ ಸಂಗತಿ. ಈ ಧಾರಾವಾಹಿಯ ನಿರ್ದೇಶಕರು ಚಂದ್ರಿಕಾಳನ್ನು ಖಳನಾಯಕಿಯಾಗಿ ಅತಿಯಾಗಿ ಬಿಂಬಿಸುತ್ತಾ ಕೊನೆಗೆ ಅವಳ ಪಾತ್ರವನ್ನು ಹೇಗೆ ಅಂತಿಮಗೊಳಿಸಬೇಕು ಎಂಬುದನ್ನು ತಿಳಿಯದೇ ಕಂಗಾಲಾಗಿದ್ದಾರೆ. ಒಬ್ಬ ಖಳನಾಯಕಿಯ ಪಾತ್ರಕ್ಕೆ ವೀಕ್ಷಕರು ಸುಸ್ತಾಗಿ ಹೋಗುತ್ತಿರುವ ಸಂದರ್ಭದಲ್ಲಿ ಮತ್ತಿಬ್ಬರು ಖಳನಾಯಕಿಯರನ್ನು ಪಕ್ಕದ ಧಾರಾವಾಹಿಯಿಂದ ಎರವಲು ಪಡೆದು ಖಳನಾಯಕಿಯರನ್ನೇ ಪದೇ ಪದೇ ಬಿಂಬಿಸುತ್ತಿರುವುದು (ಒಟ್ಟು ಮೂರು) ವೀಕ್ಷಕರ ದುರಾದೃಷ್ಟ. ಹೀಗೆ ಖಳ ನಾಯಕಿಯರನ್ನು ವೀಕ್ಷಿಸಲು ಆಸಕ್ತಿ ಕಳೆದುಕೊಂಡಿರುವ ಅಗ್ನಿಸಾಕ್ಷಿಗೆ ಹೊಸ ಹೊಸ ಪಾತ್ರಗಳನ್ನು ಸೇರಿಸುತ್ತಾ ಹೋದರೆ ಧಾರಾವಾಹಿ ಕೊನೆಗೊಳ್ಳುವುದಿಲ್ಲ. ಕೊನೆಗೆ ಅಗ್ನಿಸಾಕ್ಷಿ ವೀಕ್ಷಕರೇ ನಿರ್ದೇಶಕರ ಪಾಲಿಗೆ, 'ಅಗ್ನಿಸಾಕ್ಷಿ'ಯಾಗಿ ಬಗೆ ಬಗೆಯ ವಿಲನ್‌ಗಳಾಗಬೇಕಾಗುತ್ತದೆ.

—ಸಿ.ಎಸ್. ರಾಜೇಂದ್ರ, ಮೈಸೂರು

### ವಾರದ ಪತ್ರ

## ಸ್ತ್ರೀಪರ ದನಿ ಇಲ್ಲ

ಪ್ರಪಂಚದೆಲ್ಲೆಡೆ ಸ್ತ್ರೀ ಸ್ವಾತಂತ್ರ್ಯ, ಆಕೆಯ ಬೇಕು ಬೇಡಗಳನ್ನು ಗೌರವಿಸಬೇಕು. ವ್ಯಕ್ತಿಯಾಗಿ ಆಕೆ ಪುರುಷನಷ್ಟೇ ಸಮಾನಳೆಂದು ಚರ್ಚೆ ನಡೆಯುತ್ತಿದೆ. ಆದರೆ, ನಮ್ಮ ಕನ್ನಡ ಧಾರಾವಾಹಿಗಳು ಅನಾಗರಿಕ ಮೌಲ್ಯಗಳನ್ನೇ ಇನ್ನೂ ಪ್ರತಿಪಾದಿಸುತ್ತಿರುವುದು ವಿಷಾದಕರವಷ್ಟೇ ಅಲ್ಲ ಅಪಾಯಕರ ಕೂಡ. ಈಚೆಗೆ ಶುರುವಾಗಿರುವ 'ಮಿಥುನ ರಾಶಿ' ಈ ವಿಷಯದಲ್ಲಿ ಸಭ್ಯತೆಯ ಎಲ್ಲೇ ಮೀರುತ್ತಿದೆ. ಪ್ರಾರಂಭದಲ್ಲಿ ರಾಶಿ ಪಾತ್ರ ಒಬ್ಬ ಆಟೋ ಚಾಲಕಿಯಾಗಿ ಕಷ್ಟಪಟ್ಟು ಯಾವ ಗಂಡಸಿಗೂ ಕಮ್ಮಿಯಿಲ್ಲದಂತೆ ಸಂಸಾರಕ್ಕೆ ಸಹಾಯ ಮಾಡುತ್ತಿದ್ದು ವೀಕ್ಷಕರ ಪ್ರಶಂಸೆ ಗಳಿಸಿತ್ತು. ಸ್ವಲ್ಪ ಪೆದ್ದಾದರೂ, ಅನವಶ್ಯಕವಾಗಿ ಕಿರುಚಿಕೊಂಡು ಮಾತನಾಡಿದರೂ ಕೂಡ ಪಾತ್ರದ ಬೆಳವಣಿಗೆ ಬೇರೆ ರೀತಿಯಲ್ಲೇ ನಡೆಯಬಹುದು ಎನ್ನುವ ಭ್ರಮೆ ಹುಟ್ಟಿಸಿತ್ತು. ಆದರೆ ಮದುವೆಯಾದ ಮೇಲೆ ಕಥೆಯೇ ಬೇರೆ ದಾರಿ ಹಿಡಿದಿದೆ. ಒಬ್ಬ ಆಧುನಿಕ ಉದ್ಯೋಗಪತಿ ತನ್ನ ಹೆಂಡತಿಯನ್ನು ಈ ರೀತಿ ಮಾತನಾಡಿಸುತ್ತಾನೆ, ನಡೆಸಿಕೊಳ್ಳುತ್ತಾನೆ ಅಂದರೆ ನಂಬಲು ಸಾಧ್ಯವೇ? ಸ್ತ್ರೀ ಶೋಷಣೆ, ಸ್ತ್ರೀ ದೂಷಣೆಯ ವೈಭವೀಕರಣ ಅಸಹ್ಯವೆನಿಸುವಷ್ಟಿದೆ. ಅದರ ಜೊತೆಗೆ ಮದುವೆಯಾದ ತಂಗಿಯ ಗಂಡನ ಸೆಳೆದುಕೊಳ್ಳುವ ಪ್ರಯತ್ನ ಮಾಡುವ ಅಕ್ಕನ ಪಾತ್ರದ ಅಪಸವ್ಯ ಬೇರೆ. ನಮ್ಮ ಧಾರಾವಾಹಿಗಳಿಗೇನಾಗಿದೆ?

—ಎಂ.ಜಿ. ಶ್ರೀನಾಥ್ ಮೈಸೂರು

## ವೀಕ್ಷಕರ ಸಹನೆಗೂ ಮಿತಿಯಿದೆ

'ರಂಗನಾಯಕಿ' ಕಳೆದ ಹತ್ತು ದಿನದಿಂದ ಕಥೆಗೆ ತಿರುಳೇ ಇಲ್ಲದೆ ಯಾರು ಇಲ್ಲದ ಒಂದು ದ್ವೀಪಕ್ಕೆ ನಾಯಕನಾಯಕಿಯನ್ನು ಬಿಟ್ಟು ವೀಕ್ಷಕರ ಸಹನೆ ಕೆಣಕುತ್ತಿದ್ದರೆಂದರೆ ತಪ್ಪಲ್ಲ. ಆರಂಭದಲ್ಲೇ ಹೀಗಾದರೆ ಮುಂದಿನ ದಿನಗಳು ಇನ್ನು ಹೇಗೋ? ಸಾಲದಕ್ಕೆ ಮಕ್ಕಳಿಗೆ ತೋರಿಸುವಂತೆ 'ಗ್ರಾಫಿಕ್' ಪ್ರಾಣಿಗಳ ಪ್ರಪಂಚ ವೀಕ್ಷಕರಿಗೆ ನುಂಗಲಾರದ 'ಬಿಸಿತುಪ್ಪ' ಬೇರೆ. ದಯವಿಟ್ಟು ಧಾರಾವಾಹಿಗೆ ಸಂಬಂಧಪಟ್ಟವರು ಕಥೆ ಇಲ್ಲದಿದ್ದರೆ ಧಾರಾವಾಹಿ ಮುಕ್ತಾಯಗೊಳಿಸಿದರೆ ವೀಕ್ಷಕರಿಗೆ ಉಪಕಾರ ಮಾಡಿದಂತೆ.

—ಎನ್.ಎಸ್.ಚಂದ್ರಶೇಖರ್ ಬೆಂಗಳೂರು

## ಕಾಲ ಹರಣ

ಕನ್ನಡ ಕಲರ್ಸ್‌ನ 'ರಾಧಾ ರಮಣ'ವನ್ನು 'ಕಾಲ ಹರಣ' ಎಂದು ಶೀರ್ಷಿಕೆ ಬದಲಿಸುವುದು ಸೂಕ್ತ ಎಂದೆನಿಸುತ್ತಿದೆ. ಹರಸಾಹಸ ಪಟ್ಟಾದರೂ ಆಲದ ಮರದ ಬೇರುಗಳನ್ನು ಎಣಿಸಬಹುದು. ಆದರೆ ಈ ಧಾರಾವಾಹಿಯ ಓಟ, ಗುರಿ ಅದರ ನಿರ್ದೇಶಕರಿಗೇ ಗೊಂದಲ ಹುಟ್ಟಿಸಿದಂತೆ ಕಾಣಿಸುತ್ತಿದೆ.

ಅಲ್ಲದೆ ಪ್ರತಿ ಹೆಜ್ಜೆಯಲ್ಲೂ ಅವರ ಅಪಕ್ವತೆ ಎದ್ದು ಕಾಣುತ್ತಿದೆ. ಧಾರಾವಾಹಿಯ ಓಟ ಸೂತ್ರ ಹರಿದ ಗಾಳಿಪಟದಂತಾಗಿದೆ. ಧಾರಾವಾಹಿ ಪ್ರಸಾರಕ್ಕೆ ಮೀಸಲಾಗಿರುವುದು 30 ನಿಮಿಷ. ಅದರಲ್ಲಿ ಟೈಟಲ್ ಸಾಂಗ್, ಹಿಂದಿನ ಕಂತಿನ ಸ್ಮರಣೆಗೆ 5ನಿಮಿಷ, ಜಾಹೀರಾತಿಗೆ 8 ನಿಮಿಷ ಉಳಿದದ್ದು 17 ನಿಮಿಷ ಅದರಲ್ಲಿ ಬಹುಪಾಲು ಖಳನಾಯಕಿ ರೂಪಿಸುವ ತಲೆ ಬುಡ ಇಲ್ಲದ ಯೋಜನೆ ಇರುತ್ತದೆ. ಅದರ ಜೊತೆ ಅದೇ ಹಳಸಲು ಸಂಭಾಷಣೆ ಸೇರಿಕೊಳ್ಳುತ್ತದೆ. ಉಳಿದ ಸಮಯ ಪುನರಾವರ್ತನೆ. ಪ್ರಚಲಿತ ಸಮಾಜದ ಆಗು ಹೋಗುಗಳಿಗೆ ಒಂದಂಶವೂ ತಾಳೆ ಹೊಂದುತ್ತಿಲ್ಲ. ಒಟ್ಟಾರೆ ಕಾಲಹರಣಕ್ಕಾಗಿ ಹೆಣೆದ ಕಥೆ.

—ಅರವಿಂದ ಜಿ.ಜೋಷಿ ಮೈಸೂರು

## ಕಬ್ಬಿಣದ ಕಣ್ಣಲ್ಲಿ ನೀರು

ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದಲ್ಲಿ ಮೂಡಿಬಂದ 'ಶಂಕರ್ ಬಿದರಿ' ಕಾರ್ಯಕ್ರಮ ನಿಜಕ್ಕೂ ರೋಚಕವಾಗಿತ್ತು. ಕಳ್ಳಕಾಕರಿಗೆ ಹಾಗೂ ಸಮಾಜದ್ರೋಹಿಗಳಿಗೆ ಸಿಂಹ ಸ್ವಪ್ನರಾಗಿದ್ದ ಪೊಲೀಸ್ ಅಧಿಕಾರಿ ತನ್ನ ತಂದೆಯವರ ನಿಧನದ ಬಳಿಕ ಸಂಸಾರವನ್ನು ದಡಕ್ಕೆ ತಲುಪಿಸುವಲ್ಲಿ ಯಶಸ್ವಿಯಾದ ಬಿದರಿಯವರು ತನ್ನ ಒಡಹುಟ್ಟಿದವರ ಮಾತುಗಳಿಗೆ ಕಣ್ಣೀರಾದದ್ದು ನಮ್ಮ ಕಣ್ಣನ್ನು ತೇವಗೊಳಿಸಿತು.

—ಚಂದ್ರಶೇಖರ್